2016 ಕ.ತೀ.ವ 1709

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ

## ಸಣ್ಣ ಮಲ್ಲಪ್ಪ –ವಿರುದ್ಧ– ಆರ್.ಪಿ. ಸಿದ್ದೇಶ್ವರಪ್ಪ*

**ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ 100ರಡಿಯಲ್ಲಿ ನಿಯತ ಎರಡನೇ ಮೇಲ್ಮನವಿ. ಹಣದ ಮರುಪಾವತಿ ಕೋರಿ ಎದುರುದಾರರ ವಿರುದ್ಧ ಮೇಲ್ಮನವಿದಾರರು ಸಲ್ಲಿಸಿದ ದಾವೆಯನ್ನು ವಜಾಗೊಳಿಸಿ ಹೊರಡಿಸಿದ ಕೆಳ ನ್ಯಾಯಾಲಯಗಳ ಸಮವರ್ತಿ ತೀರ್ಪು ಹಾಗೂ ಡಿಕ್ರಿಯನ್ನು ಪ್ರಶ್ನಿಸಿ ಸದರಿ ನಿಯತ ಎರಡನೇ ಮೇಲ್ಮನವಿ.**

**ಕಾಲ ಪರಿಮಿತಿ ಕಾಯಿದೆ ಕಲಂ 4ರನ್ವಯ ಕಾಲ ಪರಿಮಿತಿಯು ನ್ಯಾಯಾಲಯಗಳು ಮುಚ್ಚಿರುವ ಸಂದರ್ಭದಲ್ಲಿ ಮುಕ್ತಾಯವಾದಲ್ಲಿ ದಾವೆಯನ್ನು ನ್ಯಾಯಾಲಯವು ಪುನಃ ಆರಂಭವಾದ ದಿನದಂದು ಸಲ್ಲಿಸಬಹುದಾಗಿರುವುದರಿಂದ ಕೆಳ ನ್ಯಾಯಾಲಯಗಳ ಡಿಕ್ರಿ ಹಾಗೂ ತೀರ್ಪನ್ನು ಬದಿಗಿರಿಸಿದ ಉಚ್ಚ ನ್ಯಾಯಾಲಯವು ಸದರಿ ಮೇಲ್ಮನವಿಯನ್ನು ಪುರಸ್ಕರಿಸಿದೆ.**

| ***ಉಲ್ಲೇಖಿಸಲಾದ ಮೊಕದ್ದಮೆಗಳು*** | ***ಪ್ಯಾರಾಗಳಲ್ಲಿ*** |
|---|---|
| *1. ಎಐಆರ್ 1935 ಪಿಸಿ 85<br>ಮಖಬುಲ್ ಅಹ್ಮದ್ –ವಿರುದ್ಧ–<br>ಓಂಕಾರ್ ಪ್ರತಾಪ್ ನರೇನ್ ಸಿಂಗ್* | *(ಉಲ್ಲೇ) 17* |
| *2. 2000(5) ಎಸ್‌ಸಿಸಿ 652<br>ರಾಜಸ್ತಾನ ರಾಜ್ಯ –ವಿರುದ್ಧ–<br>ಹರ್‌ಫೂಲ್ ಸಿಂಗ್ (ಮೃತ) ತನ್ನ<br>ಕಾನೂನು ಪ್ರತಿನಿಧಿಗಳ ಮುಖಾಂತರ,* | *(ಉಲ್ಲೇ) 23* |

*ನಿಯತ ಎರಡನೇ ಅಪೀಲು ಸಂಖ್ಯೆ: 59/2014 (ಆರ್‌ಇಎಸ್), ದಿನಾಂಕ: 4ನೇ ಜುಲೈ, 2016.

ಅಪೀಲುದಾರರ ಪರ: ಶ್ರೀಮತಿ ಎಂ.ವಿ. ತನುಜ, ವಕೀಲರು,
ವಕೀಲರಾದ ಶ್ರೀ ಈರಪ್ಪ ರೆಡ್ಡಿ ಎಂ.ರವರ ಪರವಾಗಿ.
ಪ್ರತ್ಯಪೀಲುದಾರರ ಪರ: ಶ್ರೀ ಕೆ. ಮೂರ್ತಿ, ವಕೀಲರು.

**ತೀರ್ಪು**

**ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ :**

ವಾದಿಯು ಸಲ್ಲಿಸಿದ ದಾವೆಯು ಕಾಲ ಪರಿಮಿತಿಯಿಂದ ಪ್ರತಿಷೇಧಿತವಾಗಿದೆಯೆಂಬುದರ ಆಧಾರದ ಮೇಲೆ ಮುಖ್ಯವಾಗಿ ಹಣ ವಸೂಲಿಗಾಗಿ ವಾದಿಯ ದಾವೆಯನ್ನು ವಜಾಗೊಳಿಸಿ, ಪಾವಗಡದ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಕಡತದಲ್ಲಿನ ಮೂಲ ದಾವೆ 169/10ರಲ್ಲಿ ಮಾಡಲಾದ ದಿನಾಂಕ 18.10.2012ರ ತೀರ್ಪು ಹಾಗೂ ಡಿಕ್ರಿಯನ್ನು ದೃಢೀಕರಿಸಿ, ಮಧುಗಿರಿಯ (ಪಾವಗಡದಲ್ಲಿ ಉಪವೇಶನ) ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ಕಡತದಲ್ಲಿನ ಆರ್.ಎ.ಸಂಖ್ಯೆ 105/2012ರಲ್ಲಿ ನೀಡಲಾದ ದಿನಾಂಕ 8.11.2013ರ ತೀರ್ಪು ಹಾಗೂ ಡಿಕ್ರಿಯ ವಿರುದ್ಧ ವಾದಿಯ ವಿಫಲವಾದ ನಿಯತ ಎರಡನೇ ಅಪೀಲು ಇದಾಗಿದೆ.

2. ಪ್ರತಿ ತಿಂಗಳಿಗೆ ಶೇಕಡಾ 2 ರಷ್ಟು ಬಡ್ಡಿ ದರದೊಂದಿಗೆ ಪಾವತಿಸಲು ಒಪ್ಪಿ, ಪ್ರತಿವಾದಿಯು ದಿನಾಂಕ 14.05.2007ರ ಪ್ರಾಮಿಸರಿ ನೋಟನ್ನು ಕೇಳಿದ ಕೂಡಲೇ ಬರೆದುಕೊಡುವ ಮೂಲಕ ತನ್ನ ಕುಟುಂಬದ ಕಾನೂನಿನ ಅಗತ್ಯಗಳಿಗಾಗಿ ವಾದಿಯಿಂದ ರೂ.18,000/–ಗಳನ್ನು ಸಾಲ ಪಡೆದಿದ್ದಾನೆಂದು ವಾದಿಸಿ, ದಾವೆಯ ದಿನಾಂಕದಿಂದ ಹಣ ವಸೂಲಿಯ ದಿನಾಂಕದವರೆಗೆ ಪ್ರತಿ ತಿಂಗಳಿಗೆ ಶೇ.2 ರಷ್ಟು ಬಡ್ಡಿಯೊಂದಿಗೆ ರೂ.30,960/–ಗಳ ಮೊತ್ತದ ಹಣ ವಸೂಲಿಗಾಗಿ ವಾದಿಯು ದಾವೆ ಹೂಡಿದ್ದಾನೆ, ಮತ್ತೆ ಮತ್ತೆ ಒತ್ತಾಯಿಸಿದರೂ ಪ್ರತಿವಾದಿಯು ಸಾಲದ ಹಣವನ್ನು ಪಾವತಿಸಿಲ್ಲ. ಆದುದರಿಂದ ವಾದಿಯು ದಾವೆ ಹೂಡುವ ಒತ್ತಾಯಕ್ಕೆ ಒಳಗಾಗಿದ್ದಾನೆ.

3. ಪ್ರತಿವಾದಿಯು ಪ್ರಾಮಿಸರಿ ನೋಟಿನ ಜಾರಿಯನ್ನು ನಿರಾಕರಿಸಿ ಮತ್ತು ಅಭಿಪ್ರಾಯವನ್ನು ವ್ಯಕ್ತಪಡಿಸಿ, ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದಾನೆ ಮತ್ತು ಪ್ರತಿವಾದಿಯು ವಾದಿಯಿಂದ ಸಾಲ ಪಡೆಯುವ ಅಗತ್ಯವಿರಲಿಲ್ಲ. ದಾವೆಯನ್ನು ಕಾಲಪರಿಮಿತಿಯಿಂದ ಪ್ರತಿಷೇಧಿಸಲಾಗಿದೆ. ವಾದಿಯು ವೃತ್ತಿಪರ ಸಾಲದಾತನಾಗಿದ್ದು, ಪರವಾನಗಿಯನ್ನು ಹೊಂದಿರುವುದಿಲ್ಲ. ದಾವೆಗೆ ವ್ಯಾಜ್ಯಕಾರಣ ಇರುವುದಿಲ್ಲ ಮತ್ತು ಆದುದರಿಂದ, ಸದರಿ ದಾವೆಯು ವಜಾ ಮಾಡಲು ತಕ್ಕದ್ದಾಗಿದೆ ಎಂದು ವಾದಿಸಿದ್ದಾರೆ.

4. ಮೇಲೆ ಹೇಳಿದ ವಾದ ಪ್ರತಿವಾದ ಪತ್ರಗಳ ಆಧಾರದ ಮೇಲೆ ಅಧಿವಿಚಾರಣಾ ನ್ಯಾಯಾಲಯವು ಈ ಮುಂದಿನ ವಿವಾದಾಂಶಗಳನ್ನು ರೂಪಿಸಿದೆ:

> *"1. ಪ್ರತಿವಾದಿಯು ಡಿಮ್ಯಾಂಡ್ ಪ್ರಾಮಿಸರಿ ನೋಟನ್ನು ಬರೆದುಕೊಡುವ ಮೂಲಕ ಹಣವನ್ನು ಸಾಲ ಪಡೆದಿದ್ದಾನೆಂದು ವಾದಿಯು ಸಾಬೀತುಗೊಳಿಸುವನೇ?*
>
> *2. ವಾದಿಯು ಪರವಾನಗಿ ಇಲ್ಲದ ಸಾಲದಾತನೆಂದು ಪ್ರತಿವಾದಿಯು ಸಾಬೀತುಪಡಿಸುವನೇ?*
>
> *3. ದಾವೆಯು ಕಾಲಪರಿಮಿತಿಯಿಂದ ಪ್ರತಿಷೇಧಿತವಾಗಿದೆಯೇ?*
>
> *4. ವಾದಿಯು ಕೋರಲಾದ ಪರಿಹಾರಕ್ಕೆ ಹಕ್ಕುಳ್ಳವನಾಗಿದ್ದಾನೆಯೇ?*
>
> *5. ಯಾವ ಆದೇಶ ಅಥವಾ ಡಿಕ್ರಿ?"*

5. ವಾದಿಯ ವಾದವನ್ನು ಪುಷ್ಟೀಕರಿಸುವ ಸಲುವಾಗಿ, ವಾದಿಯನ್ನು ಪ್ರಾ.ಸಾ.1 ಎಂಬುದಾಗಿ ವಿಚಾರಣೆ ಮಾಡಲಾಯಿತು ಮತ್ತು ಇಬ್ಬರು ಸಾಕ್ಷಿದಾರರನ್ನು ಪ್ರಾ.ಸಾ.2 ಹಾಗೂ 3 ಎಂದು ವಿಚಾರಣೆ ಮಾಡಲಾಯಿತು ಹಾಗೂ ನಿಶಾನೆ ಪಿ.1 ದಸ್ತಾವೇಜನ್ನು ಗುರುತಿಸಲಾಯಿತು.

ಪ್ರತಿವಾದಿಯನ್ನು ಡಿಡಬ್ಲ್ಯೂ.1 ಎಂದು ವಿಚಾರಣೆ ಮಾಡಲಾಯಿತು ಹಾಗೂ ಯಾವುದೇ ದಸ್ತಾವೇಜುಗಳನ್ನು ಗುರುತಿಸಿರುವುದಿಲ್ಲ.

6. ಅಧಿವಿಚಾರಣಾ ನ್ಯಾಯಾಲಯವು ಮೌಖಿಕ ಮತ್ತು ಅಧಿಕೃತವಾದ ದಸ್ತಾವೇಜೀಯ ಸಾಕ್ಷ್ಯಗಳೆರಡನ್ನೂ ಪರಿಗಣಿಸಿದ ಮೇಲೆ, ಪ್ರತಿವಾದಿಯು ಡಿಮ್ಯಾಂಡ್ ಪ್ರಾಮಿಸರಿ ನೋಟ್ ಬರೆದುಕೊಡುವ ಮೂಲಕ ಹಣವನ್ನು ಸಾಲ ಪಡೆದಿದ್ದಾನೆಂದು ವಾದಿಯು ಸಾಬೀತು ಮಾಡಿದ್ದಾನೆ. ವಾದಿಯು ಪರವಾನಗಿ ಇಲ್ಲದ, ವೃತ್ತಿಪರ ಸಾಲದಾತನೆಂದು ಸಾಬೀತು ಮಾಡಲು ಪ್ರತಿವಾದಿಯು ವಿಫಲನಾಗಿದ್ದಾನೆಂಬ ಸಂಗತಿಯ ನಿರ್ಣಯವನ್ನು ದಾಖಲಿಸಿರುತ್ತದೆ ಹಾಗೂ ವಾದಿಯು ಹೂಡಿದ ದಾವೆಯನ್ನು ಕಾಲಪರಿಮಿತಿಯಿಂದ ಪ್ರತಿಷೇಧಿಸಲಾಗಿದೆಯೆಂದು ನಿರ್ಧರಿಸಿದೆ. ತದನುಸಾರವಾಗಿ ದಾವೆಯನ್ನು 18.10.2012ರಂದು ವಜಾಮಾಡಲಾಯಿತು ಎಂದು ನಿರ್ಣಯವನ್ನು ದಾಖಲಿಸಿರುತ್ತದೆ.

7. ಅಧಿವಿಚಾರಣಾ ನ್ಯಾಯಾಲಯದ ಸದರಿ ತೀರ್ಪು ಮತ್ತು ಡಿಕ್ರಿಯಿಂದ ಬಾಧಿತನಾಗಿ, ವಾದಿ/ಅಪೀಲುದಾರನು, ಪಾವಗಡದ ಹಿರಿಯ ಸಿವಿಲ್ ನ್ಯಾಯಾಧೀಶರ ಸಂಚಾರಿ ನ್ಯಾಯಾಲಯದ ಸಮಕ್ಷಮದಲ್ಲಿ ಆರ್.ಎ.ಸಂಖ್ಯೆ 105/2012ನ್ನು ಸಲ್ಲಿಸಿದ್ದಾರೆ. ಆ ನಂತರ ಅವರು ಅಧಿವಿಚಾರಣಾ ನ್ಯಾಯಾಲಯದಿಂದ ದಾಖಲಿಸಲಾದ ಸಂಗತಿಯ ನಿರ್ಣಯಗಳೊಂದಿಗೆ ಸಹಮತಿಸಿ, ಎರಡೂ ಪಕ್ಷಕಾರರ ವಾದಗಳನ್ನು ಆಲಿಸಿದ್ದು, ವಾದಿಯು ಸಲ್ಲಿಸಿರುವ ದಾವೆಯನ್ನು ಕಾಲ ಪರಿಮಿತಿಯಿಂದ ಪ್ರತಿಷೇಧಿಸಲಾಗಿದೆಯೆಂಬ ಆಧಾರದ ಮೇಲೆ ಅಪೀಲನ್ನು ವಜಾ ಮಾಡಿದ್ದಾರೆ.

8. ಎರಡೂ ಅಧೀನ ನ್ಯಾಯಾಲಯಗಳು ದಾಖಲಿಸಿದ ಸಂಗತಿಗಳ ಸಮವರ್ತಿ ನಿರ್ಣಯಗಳು ಕೊನೆಯ ಹೋರಾಟದ ಪ್ರಯತ್ನವಾಗಿ ಈ ನಿಯತ ಎರಡನೇ ಅಪೀಲನ್ನು ಮಂಡಿಸುವುದರಿಂದ ಅಪೀಲುದಾರನನ್ನು ಹಿಮ್ಮೆಟ್ಟಿಸುವುದಿಲ್ಲ.

9. ದಾವೆಯ ಪಕ್ಷಕಾರರ ಪರ ಹಾಜರಾದ ಮಾನ್ಯ ವಕೀಲರ ವಾದಗಳನ್ನು ನಾನು ಆಲಿಸಿದ್ದೇನೆ.

10. ಅಪೀಲುದಾರನ ಪರ ಮಾನ್ಯ ವಕೀಲರಾದ ಶ್ರೀ ಈರಪ್ಪ ರೆಡ್ಡಿ ಎಂ. ರವರ ಪ್ರತಿನಿಧಿಯಾಗಿ ಹಾಜರಾದ ಮಾನ್ಯ ವಕೀಲರಾದ ಶ್ರೀಮತಿ ಎಂ.ವಿ. ತನುಜರವರು, ಪ್ರತಿವಾದಿಯು 14.05.2007ರಂದು ಡಿಮ್ಯಾಂಡ್ ಪ್ರಾಮಿಸರಿ ನೋಟ್ ಅನ್ನು ಬರೆದುಕೊಟ್ಟಿರುತ್ತಾನೆ ಮತ್ತು 2010ರ ಬೇಸಿಗೆ ರಜೆಯ ನಂತರ ಮರು ಪ್ರಾರಂಭಿಕ ದಿನವಾದ 24.5.2010ರಂದು ದಾವೆಯನ್ನು ಹೂಡಲಾಗಿರುತ್ತದೆ. ದಾವೆಯನ್ನು 14.5.2010ರಂದು ಅಥವಾ ಅದಕ್ಕಿಂತ ಮುಂಚೆ ಹೂಡಿರುವುದರಿಂದಾಗಿ, ಸದರಿ ಅವಧಿಯಲ್ಲಿ ನ್ಯಾಯಾಲಯ ರಜೆಯಿದ್ದು, ಆ ಕಾರಣದಿಂದ ರಜೆಗಳನ್ನು ಹೊರತುಪಡಿಸಿ, ನಂತರದ ಮೂರು ವರ್ಷಗಳ ಅವಧಿಯೊಳಗೆ ಸದರಿ ದಾವೆಯನ್ನು ಸಲ್ಲಿಸಲಾಗಿರುತ್ತದೆಂದು ಪರಿಗಣಿಸತಕ್ಕದ್ದು ಎಂಬ ಸಂಗತಿಯನ್ನು ನಿರ್ಲಕ್ಷಿಸಿ, ದಾವೆಯು ಕಾಲಪರಿಮಿತಿಯಿಂದ ಪ್ರತಿಷೇಧಿತವಾಗಿದೆಯೆಂಬ ಆಧಾರದ ಮೇಲೆ ಮುಖ್ಯವಾಗಿ ವಾದಿಯು ಸಲ್ಲಿಸಿದ ದಾವೆಯನ್ನು ವಜಾ ಮಾಡುವಲ್ಲಿ ಎರಡೂ ಅಧೀನ ನ್ಯಾಯಾಲಯಗಳು ತಪ್ಪೆಸಗಿವೆ ಎಂದು ವಾದಿಸಿದ್ದಾರೆ. ಅಷ್ಟೇ ಅಲ್ಲದೆ, ಎರಡೂ ಅಧೀನ ನ್ಯಾಯಾಲಯಗಳು ಕಾಲಪರಿಮಿತಿ ಅಧಿನಿಯಮದ 4ನೇ ಪ್ರಕರಣದ ಉಪಬಂಧಗಳನ್ನು ಪರಿಗಣಿಸಲು ವಿಫಲವಾಗಿದ್ದು, ಅದರಿಂದ ಪ್ರಶ್ನಿತ ತೀರ್ಪು ಮತ್ತು ಡಿಕ್ರಿಗಳನ್ನು ಜಾರಿಗೊಳಿಸಲು ಮುಂದಾಗಿವೆ. ಹಾಗಾಗಿ, ಅಧೀನ ನ್ಯಾಯಾಲಯಗಳ ತೀರ್ಪು ಹಾಗೂ ಡಿಕ್ರಿಯನ್ನು ಬದಿಗಿರಿಸಲು ಕೋರಲಾಗಿದೆ ಎಂದು ಅವರು ವಾದಿಸಿದ್ದಾರೆ.

11. ಇದಕ್ಕೆ ವಿರೋಧವಾಗಿ, ಪ್ರತ್ಯಪೀಲುದಾರನ ಪರ ಹಾಜರಾದ ಮಾನ್ಯ ವಕೀಲರಾದ ಶ್ರೀ ಕೆ. ಮೂರ್ತಿಯವರು, ಅಧೀನ ನ್ಯಾಯಾಲಯಗಳ ಪ್ರಶ್ನಿತ ತೀರ್ಪು ಮತ್ತು ಡಿಕ್ರಿಯನ್ನು ಸಮರ್ಥಿಸಲು ಕೋರಿದ್ದಾರೆ. ದಾವೆಯ ದಿನಾಂಕದಿಂದ ವಸೂಲಿನ ದಿನಾಂಕದವರೆಗೆ ಪ್ರತಿ ತಿಂಗಳಿಗೆ ಶೇ.2ರಷ್ಟು ಬಡ್ಡಿಯೊಂದಿಗೆ 18,000/– ರೂ.ಗಳ ವಸೂಲಿಗಾಗಿ ದಾವೆ ಹೂಡಿರುವುದರಿಂದ, ಸಿವಿಲ್ ಪ್ರಕ್ರಿಯಾ ಸಂಹಿತೆಯ 102ನೇ ಪ್ರಕರಣದಡಿ ಈ ನ್ಯಾಯಾಲಯದ ಮುಂದೆ ಸದ್ಯದ ಅಪೀಲು ಸಮರ್ಥನೀಯವಾಗಿಲ್ಲ. ಆದುದರಿಂದ ಈ ಅಪೀಲು ಊರ್ಜಿತ ಯೋಗ್ಯವಾಗಿಲ್ಲವೆಂದು ವಾದಿಸಿದ್ದಾರೆ. ಅಷ್ಟೇ ಅಲ್ಲದೆ, ದಾವೆಯನ್ನು 14.5.2010ರಂದು ಅಥವಾ ಅದಕ್ಕಿಂತ

ಮುಂಚೆ ಸಲ್ಲಿಸಬೇಕಿತ್ತು, ಆದರೆ ಅದನ್ನು 24.05.2010ರಂದು ಸಲ್ಲಿಸಲಾಗಿರುತ್ತದೆ. ಆದುದರಿಂದ ಅವರು ದಾವೆಯನ್ನು ವಜಾಗೊಳಿಸಲು ಕೋರಿದ್ದಾರೆ.

12. ಅಪೀಲನ್ನು ಅಂಗೀಕರಿಸುವಾಗ, ಈ ನ್ಯಾಯಾಲಯವು ಈ ಮುಂದಿನ ಮುಖ್ಯವಾದ ಕಾನೂನು ಪ್ರಶ್ನೆಯನ್ನು ರೂಪಿಸಿದೆ:–

> "ಅಧೀನ ನ್ಯಾಯಾಲಯಗಳು ಕಾಲ ಪರಿಮಿತಿ ಅಧಿನಿಯಮದ 4ನೇ ಪ್ರಕರಣದ ಉಪಬಂಧಗಳ ದೃಷ್ಟಿಯಲ್ಲಿ ಕಾಲ ಪರಿಮಿತಿಯಿಂದ ಪ್ರತಿಷೇಧಿತವಾದಂತೆ, ವಾದಿಯು ಸಲ್ಲಿಸಿದ ದಾವೆಯನ್ನು ವಜಾಗೊಳಿಸುವಲ್ಲಿ ಸಮರ್ಥಿತವಾಗಿವೆಯೇ?"

13. ಎರಡೂ ಪಕ್ಷಕಾರರ ಪರ ಹಾಜರಾದ ಮಾನ್ಯ ವಕೀಲರು ಮಂಡಿಸಿದ ವಾದ ವಿವಾದಗಳಿಗೆ ನನ್ನ ಆಲೋಚನಾ ಪೂರ್ಣ ಅಭಿಪ್ರಾಯವನ್ನು ನೀಡಿದ್ದೇನೆ ಹಾಗೂ ದಾಖಲೆಯಲ್ಲಿರುವ ಸಂಪೂರ್ಣ ಮಾಹಿತಿಯನ್ನು ಅವಗಾಹಿಸಿದ್ದೇನೆ.

14. ಅಂಗೀಕರಿಸಲಾದ ಸಂಗತಿಗಳು ಯಾವುವೆಂದರೆ, ದಾವೆಯ ದಿನಾಂಕದಿಂದ ವಸೂಲಿಯ ದಿನಾಂಕದವರೆಗೆ ಪ್ರತಿ ತಿಂಗಳಿಗೆ ಶೇ.2ರಷ್ಟು ಬಡ್ಡಿಯೊಂದಿಗೆ ರೂ.30,960/– ಮೊತ್ತದ ವಸೂಲಿಗಾಗಿ ವಾದಿಯು ದಾವೆ ಹೂಡಿದ್ದಾನೆ. ಪ್ರತಿವಾದಿಯು ನಿಶಾನೆ ಪಿ1ರ ಅನುಸಾರ ಡಿಮ್ಯಾಂಡ್ ಪ್ರಾಮಿಸರಿ ನೋಟ್ ಅನ್ನು ಬರೆದುಕೊಟ್ಟಿದ್ದಾನೆ ಮತ್ತು ನಿಶಾನೆ ಪಿ1 (ಎ ಮತ್ತು ಬಿ) ರಲ್ಲಿ ಪ್ರತಿವಾದಿಯ ಸಹಿಗಳಿವೆ ಹಾಗೂ ನಿಶಾನೆ ಪಿ1 (ಸಿ ಮತ್ತು ಡಿ)ರಲ್ಲಿ ಸಾಕ್ಷಿದಾರರ ಸಹಿಗಳಿವೆ ಹಾಗೂ ನಿಶಾನೆ ಪಿ1(ಇ)ರಲ್ಲಿ ಪ್ರಾ.ಸಾ.3ರ ಸಹಿಯಿದೆ, ವಾದಿಯು ಸಲ್ಲಿಸಿದ ದಾವೆಯು ಕಾಲ ಪರಿಮಿತಿಯಿಂದ ಪ್ರತಿಷೇಧಿತವಾಗಿದೆಯೆಂದು ವಾದಪತ್ರದ ದೃಢೋಕ್ತಿಗಳನ್ನು ನಿರಾಕರಿಸುವುದನ್ನು ಹೊರತುಪಡಿಸಿ, ಪ್ರತಿವಾದಿಯು ವಾದಿಯ ಕ್ಲೇಮನ್ನು ತಪ್ಪೆಂದು ಸಾಧಿಸಲು ಯಾವುದೇ ಸಾಕ್ಷ್ಯವನ್ನು ಒದಗಿಸಿಲ್ಲ ಅಥವಾ ಯಾವುವೇ ಪ್ರಮುಖ ದಸ್ತಾವೇಜುಗಳನ್ನು ಹಾಜರುಪಡಿಸಿಲ್ಲ. ಪ್ರತಿವಾದಿಯು ನಿಶಾನೆ ಪಿ.1ರ ಅನುಸಾರ ಡಿಮ್ಯಾಂಡ್ ಪ್ರಾಮಿಸರಿ ನೋಟನ್ನು ಬರೆದುಕೊಡುವ

ಮೂಲಕ ಹಣ ಸಾಲ ಪಡೆದಿದ್ದಾನೆಂದು ವಾದಿಯು ರುಜುವಾತುಪಡಿಸಿದ್ದಾನೆಂಬ ನಿರ್ಣಯವನ್ನು ಅಧಿವಿಚಾರಣಾ ನ್ಯಾಯಾಲಯವು ದಾಖಲಿಸಿದೆ ಮತ್ತು ವಾದಿಯು ಪರವಾನಗಿ ಹೊಂದಿಲ್ಲದ ವೃತ್ತಿಪರ ಸಾಲದಾತನೆಂದು ರುಜುವಾತುಪಡಿಸಲು ಪ್ರತಿವಾದಿಯು ವಿಫಲನಾಗಿದ್ದಾನೆಂದೂ ಸಹ ತೀರ್ಮಾನಿಸಿದೆ ಹಾಗೂ ನಿಶಾನೆ ಪಿ1 ಪ್ರಾಮಿಸರಿ ನೋಟನ್ನು 14.5.2007ರಂದು ಬರೆದು ಕೊಡಲಾಗಿದ್ದು ಮತ್ತು ವಾದ ಪತ್ರವನ್ನು 24.5.2010ರಂದು ಸಲ್ಲಿಸಲಾಗಿತ್ತೆಂಬುದರ ಆಧಾರದ ಮೇಲೆ ಮುಖ್ಯವಾಗಿ ದಾವೆಯನ್ನು ವಜಾಗೊಳಿಸಲು ಮುಂದಾಗಿದೆ ಹಾಗೂ ದಾವೆಯನ್ನು ಸಾಲ ಕೊಡಲಾದ ದಿನಾಂಕದಿಂದ ಮೂರು ವರ್ಷಗಳೊಳಗೆ ಸಲ್ಲಿಸಲಾಗಿಲ್ಲ, ದಾವೆಯನ್ನು 14.5.2010ರಂದು ಅಥವಾ ಅದಕ್ಕಿಂತ ಮುಂಚೆ ಸಲ್ಲಿಸಲೇಬೇಕಿತ್ತು, ಆದರೆ ದಾವೆ ಸಲ್ಲಿಸುವಲ್ಲಿ 10 ದಿನಗಳ ವಿಳಂಬವಾಗಿತ್ತು, ಆದುದರಿಂದ ದಾವೆಯನ್ನು ವಜಾಗೊಳಿಸಲಾಗಿದೆ. ಕೆಳ ಅಪೀಲು ನ್ಯಾಯಾಲಯವು ಅಧಿವಿಚಾರಣಾ ನ್ಯಾಯಾಲಯದ ನಿರ್ಣಯಗಳನ್ನು ಸಹಮತಿಸಿದೆ ಹಾಗೂ ಅಪೀಲನ್ನು ವಜಾ ಮಾಡಿದೆ.

15. ಎರಡೂ ಕೆಳ ನ್ಯಾಯಾಲಯಗಳು ಕಾಲ ಪರಿಮಿತಿ ಅಧಿನಿಯಮದ 4ನೇ ಪ್ರಕರಣದ ಉಪಬಂಧಗಳನ್ನು ಈ ಕೆಳಗಿನಂತೆ ಓದಲಾಗಿರುವುದನ್ನು ಗಮನಿಸುವಲ್ಲಿ ವಿಫಲವಾಗಿವೆ:–

> “ಪ್ರಕರಣ 4: ನ್ಯಾಯಾಲಯವು ಮುಚ್ಚಿರುವಾಗ ನಿಗದಿತ ಅವಧಿಯು ಮುಕ್ತಾಯಗೊಂಡಿರುತ್ತದೆ ಯಾವುದೇ ದಾವೆ, ಅಪೀಲು ಅಥವಾ ಅರ್ಜಿಗೆ ನ್ಯಾಯಾಲಯ ಮುಚ್ಚಿದಾಗ ನಿಗದಿತ ಅವಧಿಯು ಮುಕ್ತಾಯಗೊಳ್ಳುತ್ತದೆ. ದಾವೆ, ಅಪೀಲು ಅಥವಾ ಅರ್ಜಿಯನ್ನು ನ್ಯಾಯಾಲಯ ಪುನಃ ಆರಂಭವಾದ ದಿನದಂದು ಹೂಡಬಹುದು, ಮಂಡಿಸಬಹುದು ಅಥವಾ ಸಲ್ಲಿಸಬಹುದಾಗಿದೆ”.

ಕಾಲ ಪರಿಮಿತಿ ಅಧಿನಿಯಮದ 4ನೇ ಪ್ರಕರಣದ ಸರಳ ಓದಿನಿಂದ, ದಾವೆಯಲ್ಲಿ ನಿಗದಿಪಡಿಸಲಾದ ಕಾಲ ಪರಿಮಿತಿ ಅವಧಿಯು ನ್ಯಾಯಾಲಯ

ಮುಚ್ಚಿದ ದಿನದಂದು ಮುಕ್ತಾಯವಾದಾಗ, ದಾವೆಯನ್ನು ನ್ಯಾಯಾಲಯ ಪುನಃ ಆರಂಭಗೊಂಡ ದಿನದಂದು ಸಲ್ಲಿಸಬಹುದು ಎಂಬುದು ಸ್ಪಷ್ಟವಾಗುತ್ತದೆ.

16. ನ್ಯಾಯಾಲಯಕ್ಕೆ ರಜೆಯಿದ್ದಾಗ ಅಥವಾ ಯಾವುದೇ ಕಾರಣಕ್ಕಾಗಿ ನ್ಯಾಯಾಲಯ ಮುಚ್ಚಿದ್ದಾಗ, ದಾವೆಯನ್ನು ಸಲ್ಲಿಸಲು ಕೊನೆಯ ದಿನಾಂಕವಾಗಿದ್ದ ಸಂದರ್ಭದಲ್ಲಿ ದಾವೆ ಸಲ್ಲಿಸುವ ಕಷ್ಟವನ್ನು ನಿವಾರಿಸುವುದು ಮತ್ತು ಶ್ರಮವನ್ನು ಪರಿಹರಿಸುವುದು ಕಾಲ ಪರಿಮಿತಿ ಅಧಿನಿಯಮದ 4ನೇ ಪ್ರಕರಣದ ಉದ್ದೇಶವಾಗಿದೆ. ನ್ಯಾಯಾಲಯ ರಜೆಯಿದ್ದಾಗ ಅಥವಾ ಮುಚ್ಚಿದ್ದಾಗ ಆ ಅವಧಿಯಲ್ಲಿ ದಾವೆಯು ಕಾಲಪರಿಮಿತಿಯಿಂದ ಪ್ರತಿಷೇಧಿತವಾಗುವ ಸಂದರ್ಭದಲ್ಲಿ, ಅಂಥ ರಜೆಯ ಅಥವಾ ಮುಚ್ಚುವ ದಿನಾಂಕದ ನಂತರ ಪುನಃ ಆರಂಭವಾಗುವ ದಿನದಂದು ತಡಮಾಡದೆ ಸಲ್ಲಿಸಿದ ದಾವೆಯನ್ನು ಕಾಲ ಪರಿಮಿತಿ ಅಧಿನಿಯಮದ 4ನೇ ಪ್ರಕರಣದಿಂದ ವ್ಯಕ್ತವಾಗಿ ಉಳಿಸಲಾಗಿದೆ. ನ್ಯಾಯಾಲಯದ ಬಿಡುವಿನ, ರಜೆಯ ಅಥವಾ ಮುಚ್ಚಿದ ಅವಧಿಯ ಯಾವುದೇ ದಿನದಂದು ದಾವೆ ಸಲ್ಲಿಸುವುದಕ್ಕೆ ಸಮಯದ ಮುಕ್ತಾಯ ಏನೇ ಆಗಿದ್ದರೂ, ಅಂಥ ರಜೆ ಅಥವಾ ಬಿಡುವಿನ ನಂತರ ಪುನಃ ಆರಂಭವಾಗುವ ದಿನದಂದು ಸಲ್ಲಿಸಿದ ದಾವೆಯು, ಅಧಿನಿಯಮದ 4ನೇ ಪ್ರಕರಣವು ಅಂಥ ಸನ್ನಿವೇಶವನ್ನು ನೋಡಿಕೊಳ್ಳುವುದರಿಂದ, ಕಾಲ ಪರಿಮಿತಿಯಿಂದ ಪ್ರತಿಷೇಧಿತವಾಗಿಲ್ಲ. ರಜೆಗಳ ನಂತರ ತಡಮಾಡದೆ ಅಧಿಕಾರ ವ್ಯಾಪ್ತಿ ಹೊಂದಿರುವ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದಲ್ಲಿ, ಅಧಿನಿಯಮದ 4ನೇ ಪ್ರಕರಣವು ಕಾಲ ಪರಿಮಿತಿಯ ಪ್ರತಿಷೇಧವನ್ನು ತೆಗೆದುಹಾಕುತ್ತದೆ.

17. ಕಾಲ ಪರಿಮಿತಿ ಅಧಿನಿಯಮದ 4ನೇ ಪ್ರಕರಣವನ್ನು ಪರಿಗಣಿಸುವಾಗ ವರದಿಯಾದ ***ಮುಖಬುಲ್ ಅಹ್ಮದ್ –ವಿರುದ್ಧ– ಓಂಕಾರ್ ಪ್ರತಾಪ್ ನರೇನ್ ಸಿಂಗ್*** [1], ಪ್ರಕರಣದಲ್ಲಿ ಪ್ರೀವಿ ಕೌನ್ಸಿಲ್ ಈ ಮುಂದಿನಂತೆ ನಿರ್ಣಯಿಸಿದೆ:

> *"4ನೇ ಪ್ರಕರಣದ ಪರಿಭಾಷೆಯು ಹೇಗಿದೆಯೆಂದರೆ, ಅದನ್ನು ಈ ರೀತಿಯ ಮೊಕದ್ದಮೆಗೆ ಅನ್ವಯಿಸುವುದು ಅಸಾಧ್ಯವೆಂಬುದಾಗಿ ಮಾನ್ಯ*

1. ಎಐಆರ್ 1935 ಪಿಸಿ 85

*ನ್ಯಾಯಮೂರ್ತಿಗಳಿಗೆ ಕಂಡು ಬಂದಿರುತ್ತದೆ. ಇದರಲ್ಲಿ, ನಿಗದಿತ ಕಾಲ ಪರಿಮಿತಿ ಅವಧಿಯು, ನ್ಯಾಯಾಲಯ ಮುಚ್ಚಿದ ದಿನದಂದು ಮುಕ್ತಾಯವಾದಲ್ಲಿ, ನ್ಯಾಯಾಲಯವು ಪುನಃ ಪ್ರಾರಂಭವಾಗುವ ದಿನದಂದು ಅರ್ಜಿಯನ್ನು ಸಲ್ಲಿಸಬಹುದು ಎಂದು ಉಪಬಂಧಿಸಲಾಗಿದೆ. ಮಾನ್ಯ ನ್ಯಾಯಮೂರ್ತಿಗಳ ದೃಷ್ಟಿಯಲ್ಲಿ ಹಾಗೆಂದರೆ, ಅಂಥ ಅರ್ಜಿಯನ್ನು ಸಲ್ಲಿಸುವುದಕ್ಕಾಗಿಯೇ ಇರುವ ಯುಕ್ತ ನ್ಯಾಯಾಲಯ ಎಂದರ್ಥ".*

18. ಸದ್ಯದ ಪ್ರಕರಣದಲ್ಲಿ, ಬೇಸಿಗೆ ರಜೆಯ ಅವಧಿಯಲ್ಲಿ ದಾವೆ ಹೂಡುವುದರಿಂದ ವಾದಿಯನ್ನು ತಡೆಯಲಾಗಿಲ್ಲವೆಂಬ ಆಧಾರದ ಮೇಲೆ ಮುಖ್ಯವಾಗಿ ಅಪೀಲನ್ನು ವಜಾ ಮಾಡಲು ಅಪೀಲು ನ್ಯಾಯಾಲಯವು ಮುಂದಾಗಿದೆ. ಬೇಸಿಗೆ ರಜೆಯಲ್ಲಿ ಸಂಬಂಧಪಟ್ಟ ಜಿಲ್ಲೆಯ ತುರ್ತಾದ ಪ್ರಕರಣಗಳನ್ನು ವ್ಯವಹರಿಸಲು ರಜಾ ಕಾಲದ ಜಿಲ್ಲಾ ನ್ಯಾಯಾಧೀಶರಿರುತ್ತಾರೆ. ಕಾಲಪರಿಮಿತಿ ಅಧಿನಿಯಮದ 4ನೇ ಪ್ರಕರಣದ ಉಪಬಂಧಗಳಿಗೆ ವಿರುದ್ಧವಾಗಿ ಮತ್ತು ಸೂಕ್ತ ಕಾಲಾವಧಿಯಲ್ಲಿ ಈ ನ್ಯಾಯಾಲಯವು ಹೊರಡಿಸಿದ ರಜಾ ಅಧಿವೇಶನಕ್ಕೆ ವಿರುದ್ಧವಾಗಿದ್ದು, ಸದರಿ ನಿರ್ಣಯವು ದೋಷಪೂರ್ಣವಾಗಿದೆ.

19. ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಅಧಿನಿಯಮ, 1964ರ 28ನೇ ಪ್ರಕರಣದ ಉಪಬಂಧಗಳನ್ನು ಈ ಕೆಳಗಿನಂತೆ ಓದಲಾಗುತ್ತದೆ:–

**"28. ರಜೆ:–**

(1) ರಾಜ್ಯದಲ್ಲಿನ ಅಥವಾ ರಾಜ್ಯದ ಯಾವುದೇ ಪ್ರದೇಶದಲ್ಲಿನ ಸಿವಿಲ್ ನ್ಯಾಯಾಲಯಗಳನ್ನು, ಇಡೀ ರಾಜ್ಯಕ್ಕೆ ಅಥವಾ ರಾಜ್ಯದಲ್ಲಿನ ಅಂಥ ಪ್ರದೇಶಗಳಿಗೆ ಸಾರ್ವಜನಿಕ ರಜೆಗಳೆಂದು ರಾಜ್ಯ ಸರ್ಕಾರವು ಅಧಿಸೂಚಿಸಿರಬಹುದಾದಂತೆ ಅಂಥ ದಿನಗಳಂದು ಮುಚ್ಚತಕ್ಕದ್ದು.

(2) ಸಿವಿಲ್ ನ್ಯಾಯಾಲಯಗಳು ಪ್ರತಿ ವರ್ಷದಲ್ಲಿ ಮೂರು ರೀತಿಯ ರಜೆಗಳನ್ನು ಹೊಂದಿರತಕ್ಕದ್ದು. ಎಂದರೆ, ಬೇಸಿಗೆ ರಜೆ, ದಸರಾ ರಜೆ ಮತ್ತು ಚಳಿಗಾಲದ ರಜೆ ಹಾಗೂ ಸದರಿ ಮೂರು ರೀತಿಯ ರಜೆಗಳ ಒಟ್ಟು ಸಂಖ್ಯೆಯು ಅರವತ್ತು ದಿನಗಳು) ಮೀರತಕ್ಕದ್ದಲ್ಲ ಹಾಗೂ ಪ್ರತಿಯೊಂದು ರಜೆಯ ಅವಧಿಯನ್ನು ಉಚ್ಚ ನ್ಯಾಯಾಲಯವು ನಿಗದಿಪಡಿಸತಕ್ಕದ್ದು.

(3) ಈ ಅಧಿನಿಯಮದಲ್ಲಿ ಅಥವಾ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ ಕೇಂದ್ರ ಅಧಿನಿಯಮ 5) ರಲ್ಲಿ ಏನೇ ಒಳಗೊಂಡಿದ್ದರೂ:–

(ಎ) ಯಾವುದೇ ಜಿಲ್ಲಾ ನ್ಯಾಯಾಲಯದಲ್ಲಿ ಒಬ್ಬರಿಗಿಂತ ಹೆಚ್ಚು ಮಂದಿ ಜಿಲ್ಲಾ ನ್ಯಾಯಾಧೀಶರಿದ್ದಲ್ಲಿ, ಉಚ್ಚ ನ್ಯಾಯಾಲಯವು (ಯಾವುದೇ ರಜೆ ಅಥವಾ ಅದರ ಯಾವುದೇ ಭಾಗದಲ್ಲಿ) ಯಾವುದೇ ಜಿಲ್ಲಾ ನ್ಯಾಯಾಲಯದ ಮುಂದೂಡಿಕೆ ಅವಧಿಗಾಗಿ, ಅವರಲ್ಲಿ ಯಾರೇ ಒಬ್ಬರನ್ನು ರಜಾ ಕಾಲದ ಜಿಲ್ಲಾ ನ್ಯಾಯಾಧೀಶರನ್ನಾಗಿ ಗೊತ್ತುಪಡಿಸಬಹುದು;

(ಬಿ) ಯಾವುದೇ ಜಿಲ್ಲೆಯಲ್ಲಿ ಕೇವಲ ಒಬ್ಬರೇ ಜಿಲ್ಲಾ ನ್ಯಾಯಾಧೀಶರಿದ್ದರು, ಉಚ್ಚ ನ್ಯಾಯಾಲಯವು ಅಂಥ ಜಿಲ್ಲಾ ನ್ಯಾಯಾಧೀಶರನ್ನು ಅಧಿಸೂಚನೆಯ ಮೂಲಕ ಗೊತ್ತು ಪಡಿಸಬಹುದು ಅಥವಾ ಜಿಲ್ಲೆಯಲ್ಲಿನ (ಹಿರಿಯ ಸಿವಿಲ್ ನ್ಯಾಯಾಧೀಶರನ್ನು) ರಜಾ ಕಾಲದ ಜಿಲ್ಲಾ ನ್ಯಾಯಾಧೀಶರನ್ನಾಗಿ ಅಥವಾ ಸಂದರ್ಭಾನುಸಾರ ಆಯಾ ಜಿಲ್ಲಾ ನ್ಯಾಯಾಲಯದ ರಜಾಕಾಲದ (ಹಿರಿಯ ಸಿವಿಲ್ ನ್ಯಾಯಾಧೀಶರನ್ನಾಗಿ) (ಯಾವುದೇ ರಜೆ ಅಥವಾ ಅದರ

ಯಾವುದೇ ಭಾಗದಲ್ಲಿ) ಅಂಥ ಜಿಲ್ಲಾ ನ್ಯಾಯಾಲಯದ, ಮುಂದೂಡಿಕೆ ಕಾಲಾವಧಿಗಾಗಿ ನೇಮಿಸಬಹುದು.

ರಜಾಕಾಲದ [(ಹಿರಿಯ ಸಿವಿಲ್ ನ್ಯಾಯಾಧೀಶರು) ಅಥವಾ ರಜಾಕಾಲದ ಜಿಲ್ಲಾ ನ್ಯಾಯಾಧೀಶರು] ನಿರ್ವಹಿಸುವ ಕಾರ್ಯವನ್ನು ಉಚ್ಚ ನ್ಯಾಯಾಲಯವು ವಿಶೇಷ ಅಥವಾ ಸಾಮಾನ್ಯ ಆದೇಶದ ಮೂಲಕ ನಿಯಂತ್ರಿಸಬಹುದು.

(4) (ಎ) ರಜಾಕಾಲದ ಜಿಲ್ಲಾ ನ್ಯಾಯಾಧೀಶರ ಅಥವಾ ರಜಾ ಕಾಲದ (ಹಿರಿಯ ಸಿವಿಲ್ ನ್ಯಾಯಾಧೀಶರ) ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳು ಸಂಬಂಧಪಟ್ಟ ಜಿಲ್ಲಾ ನ್ಯಾಯಾಲಯದ ಸ್ಥಳೀಯ ಪರಿಮಿತಿಗಳಿಗೆ ಸಮಾನವಾಗಿರತಕ್ಕದ್ದು.

(ಬಿ) ರಜಾ ಕಾಲದ [(ಹಿರಿಯ ಸಿವಿಲ್ ನ್ಯಾಯಾಧೀಶರ)] ಅಧಿಕಾರ ವ್ಯಾಪ್ತಿಯನ್ನು, ಅಂಥ ನ್ಯಾಯಾಲಯವು (ಯಾವುದೇ) ರಜೆಯ ಕಾರಣಕ್ಕಾಗಿ ಮುಂದೂಡಲ್ಪಟ್ಟಾಗ, ಸಂಬಂಧಪಟ್ಟ ಜಿಲ್ಲೆಯಲ್ಲಿ ಯಾವುದೇ ಸಿವಿಲ್ ನ್ಯಾಯಾಲಯ (ಜಿಲ್ಲಾ ನ್ಯಾಯಾಲಯ [(ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ)] ಅಥವಾ [(ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ)]ದಲ್ಲಿ ಬಾಕಿ ಇರುವ ಅಥವಾ ಸಂಜ್ಞೇಯವಾಗಿರುವ ಎಲ್ಲಾ ದಾವೆಗಳು, ಅಪೀಲುಗಳು ಹಾಗೂ ಇತರ ವ್ಯವಹರಣೆಗಳಿಗೆ ವಿಸ್ತರಿಸತಕ್ಕದ್ದು.

(5) ರಜಾ ಕಾಲದ ಜಿಲ್ಲಾ ನ್ಯಾಯಾಲಯ ಅಥವಾ ರಜಾ ಕಾಲದ [(ಹಿರಿಯ ಸಿವಿಲ್ ನ್ಯಾಯಾಧೀಶರ)] ನ್ಯಾಯಾಲಯವನ್ನು ನಡೆಸತಕ್ಕ ಸ್ಥಳವು ಸಂಬಂಧಪಟ್ಟ ಜಿಲ್ಲಾ ನ್ಯಾಯಾಲಯವನ್ನು ನಡೆಸಬಹುದಾದ ಸ್ಥಳಕ್ಕೆ ಸಮನಾಗಿರತಕ್ಕದ್ದು. ರಜಾ ಕಾಲದ ಜಿಲ್ಲಾ ನ್ಯಾಯಾಧೀಶರು ಅಥವಾ ರಜಾ ಕಾಲದ [(ಹಿರಿಯ ಸಿವಿಲ್

ನ್ಯಾಯಾಧೀಶರು)], ಉಚ್ಚ ನ್ಯಾಯಾಲಯವು ಸಾಮಾನ್ಯ ಅಥವಾ ವಿಶೇಷ ಆದೇಶದಿಂದ ನಿರ್ಧರಿಸಬಹುದಾದಂತೆ, ಜಿಲ್ಲೆಯಲ್ಲಿನ ಬೇರೆ ಬೇರೆ ಸಿವಿಲ್ ನ್ಯಾಯಾಲಯಗಳ ಸಿಬ್ಬಂದಿಯ ಮೇಲೆ ಅಂಥ ಆಡಳಿತಾತ್ಮಕ ನಿಯಂತ್ರಣವನ್ನು ಹೊಂದಿರತಕ್ಕದ್ದು.

(6) ರಜಾಕಾಲದ ಜಿಲ್ಲಾ ನ್ಯಾಯಾಧೀಶರ ಅಥವಾ ರಜಾ ಕಾಲದ [ಹಿರಿಯ ಸಿವಿಲ್ ನ್ಯಾಯಾಧೀಶರು] ನೇಮಕಾತಿಯಲ್ಲಿ ಏನೇ ಇದ್ದರೂ, ಜಿಲ್ಲೆಯಲ್ಲಿನ ಪ್ರತಿಯೊಂದು ಸಿವಿಲ್ ನ್ಯಾಯಾಲಯವು (ಯಾವುದೇ) ರಜಾ ಕಾಲಕ್ಕಾಗಿ ಮುಂದೂಡಲ್ಪಟ್ಟ ಅವಧಿಯಲ್ಲಿ, ಕಾಲ ಪರಿಮಿತಿ ಅಧಿನಿಯಮ, 1963 (1963 ರ ಕೇಂದ್ರ ಅಧಿನಿಯಮ 36)ರ 4ನೇ ಪ್ರಕರಣದ ಉದ್ದೇಶಕ್ಕಾಗಿ ಮುಚ್ಚಿರಬೇಕೆಂದು ಭಾವಿಸತಕ್ಕದ್ದು.

(7) (ಯಾವುದೇ) ರಜೆಯ ನಂತರ ಜಿಲ್ಲಾ ನ್ಯಾಯಾಲಯ [(ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯವು] ಅಥವಾ [ಸಿವಿಲ್ ನ್ಯಾಯಾಧೀಶರ ನ್ಯಾಯಾಲಯವು] ಪುನಃ ಆರಂಭವಾದಾಗ, ಈ ಪ್ರಕರಣವಿರದಿದ್ದ ಪಕ್ಷದಲ್ಲಿ, ಅಂಥ ಜಿಲ್ಲಾ ನ್ಯಾಯಾಲಯದಲ್ಲಿ [(ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ] ಅಥವಾ [(ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ)] ಅಥವಾ [ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ] ಹೂಡಲಾಗಿರುವ ಅಥವಾ ಸಂದರ್ಭಾನುಸಾರ ಬಾಕಿ ಇರುವ, ರಜಾ ಕಾಲದ ಜಿಲ್ಲಾ ನ್ಯಾಯಾಧೀಶರ ಅಥವಾ ರಜಾಕಾಲದ [(ಹಿರಿಯ ಸಿವಿಲ್ ನ್ಯಾಯಾಧೀಶರ)] ನ್ಯಾಯಾಲಯದಲ್ಲಿ ಬಾಕಿ ಇರುವ ಎಲ್ಲಾ ದಾವೆಗಳು, ಅಪೀಲುಗಳು ಮತ್ತು ಇತರ ವ್ಯವಹರಣೆಗಳನ್ನು, ಅಂಥ ಜಿಲ್ಲಾ ನ್ಯಾಯಾಲಯಕ್ಕೆ [(ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ)] ಅಥವಾ [(ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ)] ವರ್ಗಾಯಿಸತಕ್ಕದ್ದು ಹಾಗೂ

ರಜಾ ಕಾಲದ ಜಿಲ್ಲಾ ನ್ಯಾಯಾಧೀಶರು ಅಥವಾ ರಜಾ ಕಾಲದ [(ಹಿರಿಯ ಸಿವಿಲ್ ನ್ಯಾಯಾಧೀಶರು)] ಹೊರಡಿಸಿದ ಯಾವುದೇ ಡಿಕ್ರಿ, ಆದೇಶ ಅಥವಾ ವ್ಯವಹರಣೆಗಳನ್ನು, ಅಂಥ ವರ್ಗಾವಣೆಯ ನಂತರ ಸಂಬಂಧಟ್ಟ ನ್ಯಾಯಾಲಯದಿಂದ ಹೊರಡಿಸಲಾದ ಡಿಕ್ರಿ, ಆದೇಶ ಅಥವಾ ವ್ಯವಹರಣೆಯೆಂದು ಭಾವಿಸತಕ್ಕದ್ದು.

(8) ಉಪ–ಪ್ರಕರಣ (7)ರ ಉಪಬಂಧಗಳಲ್ಲಿ ಏನೇ ಒಳಗೊಂಡಿದ್ದರೂ, ರಜಾ ಕಾಲದ ಜಿಲ್ಲಾ ನ್ಯಾಯಾಧೀಶರ ನ್ಯಾಯಾಲಯದ ಅಥವಾ ರಜಾ ಕಾಲದ [(ಹಿರಿಯ ಸಿವಿಲ್ ನ್ಯಾಯಾಧೀಶರ)] ನ್ಯಾಯಾಲಯದ ಡಿಕ್ರಿ ಅಥವಾ ಆದೇಶದಿಂದ ಬಂದ ಯಾವುದೇ ಅಪೀಲು, ಅಂಥ ಅಪೀಲನ್ನು ಕಾನೂನು ಪುರಸ್ಕರಿಸಿದಾಗ, ಉಚ್ಚ ನ್ಯಾಯಾಲಯದಲ್ಲಿ ಅಪೀಲಿಗೆ ಆಸ್ಪದವಿರುತ್ತದೆ.''

ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಅಧಿನಿಯಮ, 1964ರ 25ನೇ ಪ್ರಕರಣದ (6)ನೇ ಉಪ–ಪ್ರಕರಣವು, ರಜಾ ಕಾಲದ ಜಿಲ್ಲಾ ನ್ಯಾಯಾಧೀಶರ ಅಥವಾ ರಜಾಕಾಲದ [ಹಿರಿಯ ಸಿವಿಲ್ ನ್ಯಾಯಾಧೀಶರ] ನೇಮಕಾತಿಯು ಜಿಲ್ಲೆಯಲ್ಲಿನ ಪ್ರತಿಯೊಂದು ಸಿವಿಲ್ ನ್ಯಾಯಾಲಯವು [ಯಾವುದೇ] ರಜೆಗಾಗಿ ಮುಂದೂಡಲ್ಪಟ್ಟ ಅವಧಿಯಲ್ಲಿ ಕಾಲ ಪರಿಮಿತಿ ಅಧಿನಿಯಮ, 1963ರ (1963ರ ಕೇಂದ್ರ ಅಧಿನಿಯಮ 36) 4ನೇ ಪ್ರಕರಣದ ಉದ್ದೇಶಕ್ಕಾಗಿ ಮುಚ್ಚಿರಬೇಕೆಂದು ಭಾವಿಸತಕ್ಕದ್ದು ಎಂದು ಪ್ರಾರಂಭವಾಗುತ್ತದೆ.

20. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇವರು ಕರ್ನಾಟಕ ರಾಜ್ಯದಲ್ಲಿನ ಎಲ್ಲಾ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರುಗಳಿಗೆ ದಿನಾಂಕ 5.3.2010ರ ಪತ್ರವನ್ನು ರವಾನಿಸಿದ್ದು, ಅದನ್ನು ಈ ಕೆಳಗಿನಂತೆ ಓದಲಾಗಿರುತ್ತದೆ:

“ಇವರಿಗೆ:

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಬೆಂಗಳೂರು ಗ್ರಾಮಾಂತರ ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ಬೀದರ್, ಬಿಜಾಪುರ, ಚಾಮರಾಜನಗರ, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಗದಗ, ಗುಲ್ಬರ್ಗಾ, ಹಾಸನ, ಹಾವೇರಿ, ದಕ್ಷಿಣಕನ್ನಡ, ಮಂಗಳೂರು, ಉತ್ತರ ಕನ್ನಡ, ಕಾರವಾರ, ಕೊಡಗು–ಮಡಿಕೇರಿ, ಕೋಲಾರ, ಕೊಪ್ಪಳ, ಮಂಡ್ಯ, ಮೈಸೂರು, ರಾಯಚೂರು, ರಾಮನಗರ, ಶಿವಮೊಗ್ಗ, ತುಮಕೂರು ಮತ್ತು ಉಡುಪಿ, ಯಾದಗಿರಿ.

**ಮಾನ್ಯರೆ,**

**ವಿಷಯ**: ಮುಂಬರುವ 2010ರ ಬೇಸಿಗೆ ರಜೆಗಾಗಿ ರಜಾಕಾಲದ ಜಿಲ್ಲಾ ನ್ಯಾಯಾಧೀಶರು/ಸಿವಿಲ್ ನ್ಯಾಯಾಧೀಶರ ನೇಮಕಾತಿ ಪ್ರಸ್ತಾವನೆಗಳನ್ನು ಆಹ್ವಾನಿಸುವ ಬಗ್ಗೆ.

---

ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಅಧಿನಿಯಮ, 1964ರ 28(34)(ಎ)ಹಾಗೂ (ಬಿ) ಪ್ರಕರಣವು, “ರಜಾಕಾಲದಲ್ಲಿ ತುರ್ತು ವಿಷಯಗಳೊಂದಿಗೆ ವ್ಯವಹರಿಸಲು” ರಜಾ ಕಾಲದ ಜಿಲ್ಲಾ ಮತ್ತು ಸಿವಿಲ್ ನ್ಯಾಯಾಧೀಶರ ನೇಮಕಾತಿಯನ್ನು ಉಪಬಂಧಿಸುತ್ತದೆ. ಹೀಗಾಗಿ, 26ನೇ ಏಪ್ರಿಲ್ 2010ರ ಸೋಮವಾರದಿಂದ 23ನೇ ಮೇ, 2010 ಭಾನುವಾರದವರೆಗೆ ಇರುವ ಬೇಸಿಗೆ ರಜೆಗಾಗಿ ರಜಾ ಕಾಲದ ಜಿಲ್ಲಾ/ಸಿವಿಲ್ ನ್ಯಾಯಾಧೀಶರನ್ನು ನೇಮಕಗೊಳಿಸಬೇಕಿದೆ”.
**(ಒತ್ತು ನೀಡಲಾಗಿದೆ)**.

21. ಆಡಳಿತ ವಿಭಾಗದ ಸನ್ಮಾನ್ಯ ಮುಖ್ಯ ನ್ಯಾಯಮೂರ್ತಿಯವರು, ದಿನಾಂಕ 21.04.2010ರ ಅಧಿಸೂಚನೆಯಲ್ಲಿರುವಂತೆ, ಕರ್ನಾಟಕ ಸಿವಿಲ್ ನ್ಯಾಯಾಲಯಗಳ

ಅಧಿನಿಯಮ, 1964ರ 28ನೇ ಪ್ರಕರಣದ 3ನೇ ಉಪ–ಪ್ರಕರಣದ (ಎ) ಮತ್ತು (ಬಿ) ಖಂಡಗಳಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕಾಲಂ 4ರಲ್ಲಿ ಸೂಚಿಸಲಾದ 2010ರ ಬೇಸಿಗೆ ರಜೆಗಾಗಿ, ಕಾಲಂ 3 ರಲ್ಲಿ ನಮೂದಿಸಲಾದ ಜಿಲ್ಲಾ ನ್ಯಾಯಾಲಯಗಳ ಮುಂದೂಡಿಕೆಗಾಗಿನ ಅವಧಿಗೆ, ರಜಾ ಕಾಲದ ನ್ಯಾಯಾಧೀಶರನ್ನಾಗಿ ಕಾಲಂ 2ರಲ್ಲಿ ಹೆಸರಿಸಲಾದ ಜಿಲ್ಲಾ ನ್ಯಾಯಾಧೀಶರು/ ಸಿವಿಲ್ ನ್ಯಾಯಾಧೀಶರನ್ನು ನೇಮಿಸಿದ್ದಾರೆ. ಸದರಿ ಅಧಿಸೂಚನೆಯ ಭಾಗ–II ಹಾಗೂ IVನ್ನು ಈ ಮುಂದಿನಂತೆ ಓದಲಾಗಿರುತ್ತದೆ:–

**"ಭಾಗ–II**

ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಅಧಿನಿಯಮ, 1964ರ 28ನೇ ಪ್ರಕರಣದ (3)ನೇ ಉಪ–ಪ್ರಕರಣದಡಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, 2010ರ ಬೇಸಿಗೆ ರಜೆಯ ಅವಧಿಯಲ್ಲಿ ನಿರ್ಬಂಧಕಾಜ್ಞೆ, ವ್ಯವಹರಣೆಗಳ ತಡೆ ಹಾಗೂ ಜಪ್ತಿ ಆದೇಶಗಳು ಇತ್ಯಾದಿಯನ್ನು ಕೋರಲಾಗಿರುವಂಥ ತುರ್ತು ಸಿವಿಲ್ ವಿಷಯಗಳ ವಿಲೆ ಮಾಡಲು ರಜಾ ಕಾಲದ ನ್ಯಾಯಾಧೀಶರಿಗೆ ನಿರ್ದೇಶಿಸಲಾಗಿದೆ.

**"ಭಾಗ–IV**

2ನೇ ಕಾಲಂನಲ್ಲಿ ಹೆಸರಿಸಲಾದ ಸಿವಿಲ್ ನ್ಯಾಯಾಧೀಶರನ್ನು (ಹಿರಿಯ ವಿಭಾಗ) ರಜಾಕಾಲದ ಸಿವಿಲ್ ನ್ಯಾಯಾಧೀಶರನ್ನಾಗಿ ನೇಮಿಸಿರುವ ಕಡೆಗಳಲ್ಲಿ, ಅಂಥ ಅಧಿಕಾರಿಗಳನ್ನು ನೇಮಿಸಿ, ಯಾವುದೇ ತುರ್ತು ಅರ್ಜಿಯನ್ನು ವಿಲೇ ಮಾಡಲು ಉಪಬಂಧಗಳನ್ನು ಕಲ್ಪಿಸಿ, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 10ನೇ ಪ್ರಕರಣದ (3)ನೇ ಉಪ–ಪ್ರಕರಣದಡಿ ಅಗತ್ಯಪಡಿಸಲಾದಂತೆ, ಅಧಿಸೂಚನೆಯನ್ನು ಹೊರಡಿಸಲು ಜಿಲ್ಲಾ ನ್ಯಾಯಾಧೀಶರಿಗೆ ನಿರ್ದೇಶಿಸಲಾಗಿದೆ".

22. ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಅಧಿನಿಯಮ, 1964ರ 28ನೇ ಪ್ರಕರಣದ ಉಪಬಂಧಗಳ ದೃಷ್ಟಿಯಿಂದ, ಮೇಲೆ ಹೇಳಲಾದ, ಆಡಳಿತ ವಿಭಾಗದಿಂದ ಈ ನ್ಯಾಯಾಲಯವು ಹೊರಡಿಸಿದ ಪತ್ರ ಮತ್ತು ಅಧಿಸೂಚನೆಯು, ಬೇಸಿಗೆ

ರಜಾ ಅವಧಿಯಲ್ಲಿ ನಿರ್ಬಂಧಕಾಜ್ಞೆ, ವ್ಯವಹರಣೆಗಳ ತಡೆ ಹಾಗೂ ಜಪ್ತಿ ಆದೇಶಗಳು ಇತ್ಯಾದಿ ಪ್ರಕರಣಗಳ ತುರ್ತು ವಿಷಯಗಳನ್ನು ಮಾತ್ರ ಪುರಸ್ಕರಿಸಲಾಗುವುದು ಎಂಬುದುನ್ನು ಸ್ಪಷ್ಟಪಡಿಸುತ್ತದೆ. ಸದ್ಯದ ಪ್ರಕರಣದಲ್ಲಿ, ಹಣವನ್ನು ವಸೂಲಿ ಮಾಡಲು ಮಾತ್ರ ದಾವೆ ಹೂಡಲಾಗಿದ್ದು, ಇದರಲ್ಲಿ ಯಾವುದೇ ತುರ್ತು ಅಗತ್ಯವಿರಲಿಲ್ಲ, ಬೇಸಿಗೆ ರಜೆಯ ಅವಧಿಯಲ್ಲಿ ದಾವೆ ಹೂಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಸದ್ಯದ ಪ್ರಕರಣದಲ್ಲಿ ದಾವೆಯನ್ನು ನ್ಯಾಯಾಲಯ ಪುನಃ ಪ್ರಾರಂಭವಾದ ದಿನದಂದು, ಎಂದರೆ, ಉದ್ದೇಶಿಸಲಾದಂತೆ ಮೂರು ವರ್ಷಗಳೊಳಗೆ, 24.05.2010ರಂದು ಹೂಡಲಾಯಿತು ಮತ್ತು ಅದು ಕಾಲ ಪರಿಮಿತಿ ಅಧಿನಿಯಮದ 4ನೇ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿದೆ ಮತ್ತು ಬೇಸಿಗೆ ರಜೆಯ ಅವಧಿಯಲ್ಲಿ ದಾವೆ ಹೂಡುವುದರಿಂದ ವಾದಿಯನ್ನು ತಡೆದಿಲ್ಲವೆಂದು ಅಧೀನ ನ್ಯಾಯಾಲಯಗಳು ನೀಡಿದ ಅಭಿಪ್ರಾಯವು ಈ ನ್ಯಾಯಾಲಯವು ಹೊರಡಿಸಿದ ಅಧಿಸೂಚನೆಗೆ ವಿರುದ್ಧವಾಗಿದೆ ಹಾಗೂ ಕಾಲ ಪರಿಮಿತಿ ಅಧಿನಿಯಮದ 4ನೇ ಪ್ರಕರಣಕ್ಕೆ ವಿರುದ್ಧವಾಗಿದೆ.

23. ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು, ವರದಿಯಾದ ***ರಾಜಸ್ತಾನ ರಾಜ್ಯ –ವಿರುದ್ಧ– ಹರ್‌ಘೂಲ್ ಸಿಂಗ್ (ಮೃತ) ತನ್ನ ಕಾನೂನು ಪ್ರತಿನಿಧಿಗಳ ಮುಖಾಂತರ***[2], ಪ್ರಕರಣದಲ್ಲಿ ಕಾಲ ಪರಿಮಿತಿ ಅಧಿನಿಯಮದ 116(ಬಿ) ಅನುಚ್ಛೇದದ ಉಪಬಂಧಗಳನ್ನು ಪರಿಗಣಿಸುವಾಗ, 9ನೇ ಕಂಡಿಕೆಯಲ್ಲಿ ಈ ಕೆಳಗಿನಂತೆ ತೀರ್ಮಾನಿಸಿದೆ:–

> *"9. ಕಾಲ ಪರಿಮಿತಿಯ ಪ್ರಶ್ನೆಯನ್ನು ಮೊದಲು ಪ್ರಸ್ತಾಪಿಸುತ್ತಾ ತಿಳಿಸುವುದೇನೆಂದರೆ, ಮೊದಲ ಅಪೀಲು ನ್ಯಾಯಾಲಯವು ತನ್ನ ಮುಂದೆ ಬಂದ ಅಪೀಲನ್ನು ತಿರಸ್ಕರಿಸಿದ್ದು, ಮತ್ತು ಉಚ್ಚ ನ್ಯಾಯಾಲಯವು ಅದನ್ನು ಪರಿಗಣಿಸಿರದಿದ್ದರೂ*

2. 2000(5) ಎಸ್‌ಸಿಸಿ 652

*ನಮ್ಮ ಮುಂದೆ ಬಂದಿದ್ದು, ದಿನಾಂಕ 11.4.1989ರಂದು ರಾಜ್ಯವು ತೀರ್ಪಿನ ಪ್ರತಿಗೆ ಅರ್ಜಿ ಸಲ್ಲಿಸಿದೆಯೆಂದು ಮತ್ತು 9.5.1989ರಂದು ಬೇಸಿಗೆ ರಜೆ ಪ್ರಾರಂಭವಾಯಿತೆಂದು ಅಧಿವಿಚಾರಣಾ ನ್ಯಾಯಾಲಯವು ತನ್ನ ತೀರ್ಪನ್ನು ನೀಡಿದೆ ಎಂದು ದಾಖಲೆಯಲ್ಲಿ ಮಂಡಿಸಲಾದ ಸಾಕ್ಷ್ಯಾಧಾರಗಳಿಂದ ನಮಗೆ ತಿಳಿದುಬಂದಿದೆ. 9.5.1989ರಂದು ತೀರ್ಪಿನ ಪ್ರತಿಯನ್ನು ಸ್ವೀಕರಿಸಿದ ನಂತರ, ಡಿಕ್ರಿಯ ಪ್ರತಿಗಾಗಿ ಅರ್ಜಿಯನ್ನು 12.5.1989ರಂದು ಮಾತ್ರ ಮಾಡಲಾಯಿತು ಹಾಗೂ ಅಪೀಲನ್ನು 3.7.1989ರಂದು ಹೂಡಲಾಯಿತು. ಅದು ಬೇಸಿಗೆ ವಿರಾಮದ ನಂತರ ನ್ಯಾಯಾಲಯಗಳು ಪುನಃ ಆರಂಭವಾಗಿವೆಯೆಂದು ಹೇಳಲಾದ ದಿನಾಂಕವಾಗಿದೆ. ದಿನಾಂಕ 10.04.1989ರ ತೀರ್ಪಿನ ಪ್ರತಿಯನ್ನು 9.5.1989ರಂದು ಒದಗಿಸಿದ್ದಲ್ಲಿ, ಅಪೀಲು ಹೂಡಲು ಇದ್ದ ಕಾಲ ಪರಿಮಿತಿಯನ್ನು 8.6.1989ರ ವರೆಗೆ ವಿಸ್ತರಿಸಲಾಗುತ್ತಿತ್ತು ಮತ್ತು ಅಂಥ ಅವಧಿಯಲ್ಲಿ ದಿನಾಂಕ 12.5.1989ರಂದು ಡಿಕ್ರಿಯ ಪ್ರತಿಗಾಗಿ ಅರ್ಜಿ ಸಲ್ಲಿಸಿದ್ದು, ಅದು ಕಾಲ ಪರಿಮಿತಿ ಅವಧಿಯ ನಂತರ ಮಾಡಲಾಗಿದೆಯೆಂದು ಹೇಳಲಾಗುವುದಿಲ್ಲ ಮತ್ತು ಮಧ್ಯೆ ಬರುವ ಬೇಸಿಗೆ ವಿರಾಮ ಅವಧಿಗೆ ಸಂಬಂಧಿಸಿದಂತೆ, ರಜಾ ಕಾಲದ ನಂತರ ಪುನಃ ಆರಂಭವಾಗುವ ಮೊದಲ ದಿನದಂದು ತೀರ್ಪು ಹಾಗೂ ಡಿಕ್ರಿಯ ಪ್ರತಿಗಳೊಂದಿಗೆ, ಡಿಕ್ರಿಯ ಪ್ರತಿಯನ್ನು ಪಡೆದುಕೊಂಡ ನಂತರ ಪುನಃ ಆರಂಭವಾಗುವ ದಿನದಂದು ಅಪೀಲು ಹೂಡುವಿಕೆಯು ಕಾಲ ಪರಿಮಿತಿ ಅವಧಿಯೊಳಗೆ ಸರಿಯಾಗಿರುತ್ತದೆ ಹಾಗೂ ಮೊದಲನೇ ಅಪೀಲು ನ್ಯಾಯಾಲಯವು ಗೊತ್ತುಪಡಿಸಿದ ಸದರಿ ಆಧಾರದಲ್ಲಿ ಯಾವುದೇ ಹುರುಳಿಲ್ಲ. ಮೂಲ ದಾಖಲೆಗಳ ಕಡೆಗೆ ನಮ್ಮ ಗಮನವನ್ನು ಸೆಳೆಯಲಾಗಿದ್ದು, ಅದರಲ್ಲಿ ಅಪೀಲನ್ನು ನಿಗದಿತ ಸಮಯದೊಳಗೆ ಹೂಡಲಾಗಿದೆ ಎಂಬುದಾಗಿ, ಮೊದಲನೇ ಅಪೀಲು ನ್ಯಾಯಾಲಯದ ಕಛೇರಿಯು ಅಪೀಲು ಪತ್ರಗಳ ಪರಿಷ್ಕರಣೆ ಮಾಡಿದ ನಂತರ ಒಂದು ನಿರ್ದಿಷ್ಟ*

*ಹಿಂಬರಹವನ್ನು ನೀಡಿರುವುದು ನಮಗೆ ಕಂಡುಬಂದಿದೆ. ಆದುದರಿಂದ, ಮೊದಲನೇ ಅಪೀಲು ನ್ಯಾಯಾಲಯವು ಅದಕ್ಕೆ ತದ್ವಿರುದ್ಧವಾಗಿ ತೀರ್ಮಾನಿಸುವಲ್ಲಿ ತಪ್ಪೆಸಗಿದೆ".*

24. ಮೇಲೆ ಹೇಳಲಾದ ಕಾರಣಗಳ ದೃಷ್ಟಿಯಿಂದ, ಕಾಲ ಪರಿಮಿತಿ ಅಧಿನಿಯಮದ 4ನೇ ಪ್ರಕರಣದ ಉಪಬಂಧಗಳ ದೃಷ್ಟಿಯಿಂದ, ಹೂಡಲಾದ ದಾವೆಯನ್ನು ಕಾಲ ಪರಿಮಿತಿಯಿಂದ ಪ್ರತಿಷೇಧಿಸಲಾಗಿದೆ ಎಂಬುದರ ಆಧಾರದ ಮೇಲೆ ಮುಖ್ಯವಾಗಿ, ವಾದಿಯ ದಾವೆಯನ್ನು ವಜಾ ಮಾಡುವಲ್ಲಿ ಅಧೀನ ನ್ಯಾಯಾಲಯಗಳು ಸಮರ್ಥನೀಯವಾಗಿರಲಿಲ್ಲವೆಂದು ತೀರ್ಮಾನಿಸಿ, ಕಾನೂನಿನ ಗಣನಾರ್ಹ ಪ್ರಶ್ನೆಗೆ 'ಋಣಾತ್ಮಕ'ವಾಗಿ ಉತ್ತರಿಸಬೇಕಾಗುತ್ತದೆ.

25. ಪ್ರತ್ಯರ್ಜಿದಾರರ ಪರ ಮಾನ್ಯ ವಕೀಲರು ಮಂಡಿಸಿದ ವಾದಗಳ ಮಟ್ಟಿಗೆ, ಅಂಗೀಕರಿಸಲಾದಂತೆ ದಾವೆಯ ದಿನಾಂಕದಿಂದ ವಸೂಲಿಯ ದಿನಾಂಕದವರೆಗೆ ಪ್ರತಿ ತಿಂಗಳಿಗೆ ಶೇಕಡಾ 2 ರಷ್ಟು ಬಡ್ಡಿಯೊಂದಿಗೆ ರೂ.30,960/– ಗಳ ವಸೂಲಿಗಾಗಿ ವಾದಿಯು ಸದ್ಯದ ದಾವೆಯನ್ನು ಹೂಡಿದ್ದಾನೆಂಬ ಸರಳ ಕಾರಣಕ್ಕಾಗಿ, ರೂ.18,000/–ಗಳ ವಸೂಲಿಗಾಗಿ ಹೂಡಲಾದ ದಾವೆಯನ್ನು ಒಪ್ಪಿಕೊಳ್ಳಲಾಗದು ಎಂಬುದರ ಆಧಾರದ ಮೇಲೆ, ಸಿವಿಲ್ ಪ್ರಕ್ರಿಯಾ ಸಂಹಿತೆಯ 100ನೇ ಪ್ರಕರಣದಡಿ ಈ ನ್ಯಾಯಾಲಯದ ಮುಂದೆ ಸಲ್ಲಿಸಿದ ಸದ್ಯದ ನಿಯತ ಎರಡನೇ ಅಪೀಲು ಸಿವಿಲ್ ಪ್ರಕ್ರಿಯಾ ಸಂಹಿತೆಯ 102ನೇ ಪ್ರಕರಣದ ಉಪಬಂಧಗಳಿಗೆ ಸಂಬಂಧಿಸಿದಂತೆ ಸಮರ್ಥನೀಯವಾಗಿಲ್ಲ. ಸಿವಿಲ್ ಪ್ರಕ್ರಿಯಾ ಸಂಹಿತೆಯ 102ನೇ ಪ್ರಕರಣವು ಈ ಮುಂದಿನಂತೆ ವ್ಯವಹರಿಸುತ್ತದೆ:–

"ಕೆಲವು ಪ್ರಕರಣಗಳಲ್ಲಿ ಎರಡನೇ ಅಪೀಲು ಇರುವುದಿಲ್ಲ – ಮೂಲ ದಾವೆಯ ವಸ್ತು ವಿಷಯವು ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಮೀರದ ಹಣ ವಸೂಲಿಗೆ ಸಂಬಂಧಪಟ್ಟಿದ್ದಾಗ ಯಾವುದೇ ಡಿಕ್ರಿಯಿಂದ ಯಾವುದೇ ನಿಯತ ಎರಡನೇ ಅಪೀಲಿಗೆ ಆಸ್ಪದವಿರತಕ್ಕದ್ದಲ್ಲ".

26. ಸದ್ಯದ ಪ್ರಕರಣದಲ್ಲಿ, ಮೂಲ ದಾವೆಯ ವಸ್ತು ವಿಷಯವು ದಾವೆಯ ದಿನಾಂಕದಿಂದ ವಸೂಲಿಯ ದಿನಾಂಕದವರೆಗೆ ಪ್ರತಿತಿಂಗಳಿಗೆ ಶೇಕಡಾ 2 ರಷ್ಟು ದರದೊಂದಿಗೆ ರೂ.30,960/–ಗಳ ವಸೂಲಿಗೆ ಸಂಬಂಧಿಸಿದ್ದಾಗಿದೆ. ಆದುದರಿಂದ ಪ್ರತ್ಯರ್ಜಿದಾರರ ಪರ ಮಾನ್ಯ ವಕೀಲರ ವಾದವನ್ನು ಅಂಗೀಕರಿಸಲಾಗುವುದಿಲ್ಲ. ದಾವೆಯ ವಸ್ತು ವಿಷಯವು ರೂ.30,960/– ಮೊತ್ತದ ವಸೂಲಿಗೆ ಸಂಬಂಧಿಸಿದ್ದು, ಅದು ಸಿವಿಲ್ ಪ್ರಕ್ರಿಯಾ ಸಂಹಿತೆಯ 12ನೇ ಪ್ರಕರಣದಡಿ ನಿಗದಿಪಡಿಸಲಾದ ಮಿತಿಯನ್ನು ಮೀರಿದ್ದಾಗಿರುವ ಕಾರಣದಿಂದಾಗಿ ಈಗಿನ ನಿಯತ ಎರಡನೇ ಅಪೀಲು ಸಮರ್ಥನೀಯವಾಗಿದೆ.

27. ವಾದಿಯು ಹೂಡಿದ ದಾವೆಯನ್ನು ಮುಖ್ಯವಾಗಿ ಕಾಲ ಪರಿಮಿತಿಯಿಂದ ಪ್ರತಿಷೇಧಿಸಲಾಗಿದೆಯೆಂಬ ಆಧಾರದ ಮೇಲೆ ಎರಡೂ ನ್ಯಾಯಾಲಯಗಳು ದಾವೆಯನ್ನು ವಜಾ ಮಾಡಲು ಮುಂದಾಗಿವೆ ಎಂಬುದು ವಿವಾದದಲ್ಲಿಲ್ಲ. ಈ ನ್ಯಾಯಾಲಯವು ಕಾನೂನಿನ ಗಣನಾರ್ಹ ಪ್ರಶ್ನೆಗೆ ಉತ್ತರಿಸುವಾಗ, ದಾವೆಯನ್ನು ಕಾಲಮಿತಿಯಿಂದ ಪ್ರತಿಷೇಧಿಸಿಲ್ಲ ಮತ್ತು ಕಾಲ ಪರಿಮಿತಿ ಅಧಿನಿಯಮದ 4ನೇ ಪ್ರಕರಣದ ಉಪಬಂಧಗಳ ದೃಷ್ಟಿಯಿಂದ ಹಾಗೂ ಮೇಲೆ ಹೇಳಲಾದಂತೆ ಆಡಳಿತ ಶಾಖೆಯ ಕಡೆಯಿಂದ, ಈ ನ್ಯಾಯಾಲಯದ ಸನ್ಮಾನ್ಯ ಮುಖ್ಯ ನ್ಯಾಯಮೂರ್ತಿಯವರು ಹೊರಡಿಸಿದ ಅಧಿಸೂಚನೆಯ ದೃಷ್ಟಿಯಿಂದ ನಿಗದಿತ ಸಮಯದೊಳಗೆ ದಾವೆ ಹೂಡಲಾಗಿದೆ ಎಂದು ಅಭಿಪ್ರಾಯಪಟ್ಟಿದೆ.

28. ಪ್ರತಿವಾದಿಯು ಹಣವನ್ನು ಸಾಲ ಪಡೆದಿದ್ದಾನೆಂದು ಮತ್ತು ನಿಶಾನೆ ಪಿ.1(ಎ) ಯಿಂದ ನಿಶಾನೆ ಪಿ.1 (ಇ) ವರೆಗಿನ ನಿಶಾನೆ ಪಿ.1ಕ್ಕೆ ಡಿಮ್ಯಾಂಡ್ ಪ್ರಾಮಿಸರಿ ನೋಟ್ ಬರೆದುಕೊಟ್ಟಿದ್ದಾನೆಂದು ವಾದಿಯು ಸಾಬೀತು ಮಾಡಿದ್ದಾನೆ ಹಾಗೂ ವಾದಿಯು ಯಾವುದೇ ಪರವಾನಗಿಯಿಲ್ಲದೆ ಸಾಲ ನೀಡಿರುವಾತನೆಂದು ಸಾಬೀತು ಮಾಡಲು ಪ್ರತಿವಾದಿಯು ವಿಫಲನಾಗಿದ್ದಾನೆ ಎಂದು ಎರಡೂ ಅಧೀನ ನ್ಯಾಯಾಲಯಗಳು ಸಮವರ್ತಿಯಾಗಿ ತೀರ್ಮಾನಿಸಿವೆ ಎಂಬುದೂ ಸಹ ವಿವಾದದಲ್ಲಿಲ್ಲ. ಅಂಗೀಕರಿಸಲಾದಂತೆ, ಅಧೀನ ನ್ಯಾಯಾಲಯಗಳು ದಾಖಲಿಸಿರುವ ಸಂಗತಿಯು ಸದರಿ ನಿರ್ಣಯವನ್ನು ಪ್ರತಿವಾದಿಯು ಕೆಳ ಅಪೀಲು

ನ್ಯಾಯಾಲಯದಲ್ಲಾಗಲೀ ಅಥವಾ ಈ ನ್ಯಾಯಾಲಯದಲ್ಲಾಗಲೀ ಪ್ರಶ್ನಿಸಿಯೇ ಇಲ್ಲ. ಡಿಮ್ಯಾಂಡ್ ಪ್ರಾಮಿಸರಿ ನೋಟ್ ಮೇಲೆ ನಿಶಾನೆ ಪಿ.1ರ ಸಾಕ್ಷ್ಯಾಧಾರಕ್ಕೆ ಮತ್ತು ದಾವೆಯ ದಿನಾಂಕದಂದು ಇದ್ದಂತೆ ವಾದಿಯು ಪರವಾನಗಿಯನ್ನು ಹೊಂದಿರುವುದಕ್ಕೆ ಸಂಬಂಧಪಟ್ಟ ನಿರ್ಣಯಕ್ಕೆ ಯಾವುದೇ ಪ್ರಶ್ನೆಯಿರದಿದ್ದಾಗ, ಕಾಲ ಪರಿಮಿತಿ ಕಾನೂನು ಕುರಿತಂತೆ ಅಧಿವಿಚಾರಣಾ ನ್ಯಾಯಾಲಯದಿಂದ ಪುನರ್ ನ್ಯಾಯ ನಿರ್ಣಯದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಉದ್ದೇಶಿಸಲಾದಂತೆ ದಾವೆಯನ್ನು 3 ವರ್ಷದೊಳಗಾಗಿ ಹೂಡಲಾಗಿದೆಯೆಂದು ಈ ನ್ಯಾಯಾಲಯವು ತೀರ್ಮಾನಿಸಿದೆ.

29. ಮೇಲೆ ಹೇಳಿದ ಕಾರಣಗಳ ದೃಷ್ಟಿಯಿಂದ, ಈ ಅಪೀಲನ್ನು ಪುರಸ್ಕರಿಸಲಾಗಿದೆ ಮತ್ತು ಅಧೀನ ನ್ಯಾಯಾಲಯಗಳು ಹೊರಡಿಸಿದ ಪ್ರಶ್ನಿತ ತೀರ್ಪು ಹಾಗೂ ಡಿಕ್ರಿಯನ್ನು ಬದಿಗಿರಿಸಲಾಗಿದೆ. ದಾವೆಯ ದಿನಾಂಕದಿಂದ ವಸೂಲಿಯವರೆಗೆ ಪ್ರತಿ ವರ್ಷಕ್ಕೆ ಶೇಕಡಾ 8 ರಷ್ಟು ಬಡ್ಡಿಯೊಂದಿಗೆ ರೂ.30,960/– ಮೊತ್ತದ ವಸೂಲಿಗೆ ಡಿಕ್ರಿ ನೀಡಿ ಮೂ.ದಾ.ಸಂ.169/2010ರ ಮೂಲ ದಾವೆಯನ್ನು ಭಾಗಶಃ ಡಿಕ್ರಿಗೊಳಿಸಲಾಗಿದ್ದು, ಸದ್ಯದ ಪ್ರಕರಣದ ಸಂಗತಿಗಳು ಹಾಗೂ ಸಂದರ್ಭ ಸನ್ನಿವೇಶಗಳನ್ನು ಗಣನೆಗೆ ತೆಗೆದುಕೊಂಡಾಗ ಅದು ಸಮಂಜಸವಾಗಿರುತ್ತದೆ.